ತನ್ನ ಶತ್ರುಗಳ ವಿಷಯದಲ್ಲಿ ಗೃಹಸ್ಥನು ಶೂರನಂತೆ ವರ್ತಿಸಬೇಕು. ಶತ್ರುವನ್ನು ನಿರೋಧಿಸಬೇಕು. ಅದು ಗೃಹಸ್ಥನ ಕರ್ತವ್ಯ. ಮೂಲೆಯಲ್ಲಿ ಅಳುತ್ತ ಕುಳಿತು ಅಪ್ರತೀಕಾರ, ಅಹಿಂಸೆಗಳ ವಿಷಯವಾಗಿ ಅಸಂಬದ್ಧ ಪ್ರಲಾಪ ಮಾಡಕೂಡದು. ತನ್ನ ಶತ್ರುಗಳಿಗೆ ತಾನು ಶೂರನೆಂದು ಗೃಹಸ್ಥನು ತೋರಿಸದೆ ಇದ್ದಲ್ಲಿ ಆತನು ತನ್ನ ಕರ್ತವ್ಯಗಳನ್ನು ಮಾಡಿದಂತಾಗದು. ತನ್ನ ಸ್ನೇಹಿತರ ಮತ್ತು ಬಂಧುಗಳ ವಿಷಯದಲ್ಲಿ ಕುರಿಮರಿಯಂತೆ ಸಾಧುವಾಗಿರಬೇಕು.

ದುಷ್ಟರಿಗೆ ಮರ್ಯಾದೆ ಮಾಡದೆ ಇರುವುದು ಗೃಹಸ್ಥನ ಕರ್ತವ್ಯ. ಏಕೆಂದರೆ ಈ ಪ್ರಪಂಚದಲ್ಲಿ ಕೆಟ್ಟವರಿಗೆ ಆತ ಮನ್ನಣೆ ತೋರಿಸಿದರೆ, ಕೆಟ್ಟುದಕ್ಕೆ ಆಶ್ರಯ ಕೊಟ್ಟಂತಾಗುತ್ತದೆ. ಮಾನಾರ್ಹರನ್ನೂ ಸಾಧುಶೀಲರನ್ನೂ ಅಲಕ್ಷ್ಯ ಮಾಡುವುದು ದೊಡ್ಡ ತಪ್ಪು. ಗೆಳೆತನದಲ್ಲಿ ಅತಿರೇಕ ಇರಕೂಡದು. ಎಲ್ಲೆಲ್ಲಿಯೂ ತಾನಾಗಿಯೇ ಮುಂದೆ ಬಿದ್ದು ಗೆಳೆಯರನ್ನು ಮಾಡಿಕೊಳ್ಳಕೂಡದು. ಯಾರ ಸ್ನೇಹ ಮಾಡಿಕೊಳ್ಳಬೇಕೆಂಬ ಇಚ್ಛೆ ಇರುವುದೋ ಅವರ ಚರ್ಯೆಗಳನ್ನೂ, ಅವರು ಇತರರೊಡನೆ ನಡೆಯಿಸುವ ವ್ಯವಹಾರಗಳನ್ನೂ ಪರೀಕ್ಷಿಸಿ, ವಿಚಾರ ಮಾಡಿ, ತರುವಾಯ ಅವರ ಸ್ನೇಹವನ್ನು ಬೆಳೆಯಿಸಬೇಕು.

ಈ ಮೂರನ್ನು ಕುರಿತು ಗೃಹಸ್ಥನು ಬಾಯಿ ತೆರೆಯಬಾರದು: ಮಂದಿಯ ಮುಂದೆ ತನ್ನ ಖ್ಯಾತಿಯನ್ನು ಕುರಿತು ಮಾತನಾಡಬಾರದು; ತನ್ನ ಹೆಸರನ್ನಾಗಲಿ, ತನ್ನ ಶಕ್ತಿಗಳನ್ನಾಗಲೀ ಪ್ರಕಟಪಡಿಸಕೂಡದು; ತನ್ನ ಐಶ್ವರ್ಯ ಅಥವಾ ತನಗೆ ತಿಳಿದಿರುವ ಗುಟ್ಟು, ಇವುಗಳನ್ನು ಕುರಿತು ಬಾಯಿಬಿಡಬಾರದು.

ತಾನು ಬಡವನೆಂದಾಗಲೀ, ದುಡ್ಡುಕಾಸಿನವನೆಂದಾಗಲೀ ಹೇಳಕೂಡದು. ತನ್ನ ಸಂಪತ್ತಿನ ವಿಷಯವಾಗಿ ಬಡಾಯಿ ಕೊಚ್ಚಬಾರದು. ತನ್ನ ಇಂಗಿತವನ್ನು ತನ್ನಲ್ಲೇ ಇಟ್ಟುಕೊಂಡಿರಬೇಕು. ಇದು ಆತನ ಧಾರ್ಮಿಕ ಕರ್ತವ್ಯ. ಇದೇನು ಬರಿಯ ಪ್ರಾಪಂಚಿಕ ವ್ಯವಹಾರಜ್ಞಾನ ಮಾತ್ರವಲ್ಲ, ಹೀಗೆ ಮಾಡದಿದ್ದಲ್ಲಿ ಆತನನ್ನು ಅನೀತಿವಂತನೆಂದು ಭಾವಿಸಬಹುದು.

ಇಡೀ ಸಮಾಜಕ್ಕೇ ಗೃಹಸ್ಥನು ತಳಹದಿ, ಊರೆಗೋಲು, ಮುಖ್ಯವಾಗಿ ಹಣ ಸಂಪಾದನೆ ಮಾಡುವವನು ಆತನೇ. ಬಡವರು, ಬಲಹೀನರು, ಕಾರ್ಯಮಾಡಲಾರದ ಮಕ್ಕಳುಮರಿ, ಹೆಂಗಸರು – ಇವರೆಲ್ಲರಿಗೆ ಗೃಹಸ್ಥನೇ ಆಶ್ರಯ. ಆದುದರಿಂದ ಆತನು ಮಾಡತಕ್ಕ ಕೆಲವು ಕರ್ತವ್ಯಗಳಿರಲೇಬೇಕು. ಈ ಕರ್ತವ್ಯಗಳು ಅವುಗಳನ್ನು ನೆರವೇರಿಸಲು ಅವನಿಗೆ ಶಕ್ತಿಯನ್ನು ನೀಡಬೇಕು. ತನ್ನ ಆದರ್ಶದ ಮಟ್ಟಕ್ಕೆ ಬಾರದ, ಕೀಳಾದುವುಗಳನ್ನು ತಾನು ಮಾಡುತ್ತಿರುವೆನೆಂಬ ಚಿಂತೆಯನ್ನು ಆ ಕರ್ತವ್ಯಗಳು ಆತನಲ್ಲಿ ಹುಟ್ಟಿಸಕೂಡದು. ಆದುದರಿಂದ ಆತನು ಏನಾದರೂ ಬಲಹೀನವಾದುದನ್ನೋ ತಪ್ಪನ್ನೋ ಮಾಡಿರುವ ಪಕ್ಷಕ್ಕೆ ಆತನ ಕಡೆಯವರ ಮುಂದೆ ಆತ ಹಾಗೆ ಮಾಡಿರುವೆನೆಂದು ಹೇಳಕೂಡದು. ಯಾವುದೋ ಕಾರ್ಯವನ್ನು ಕೈಗೊಂಡಿದ್ದು, ಆ ಕಾರ್ಯವು ಸಿದ್ಧಿಸದೆಂದು ಆತನಿಗೆ ದೃಢವಾಗಿ ತಿಳಿದಿದ್ದಲ್ಲಿ ಅದರ ವಿಷಯವಾಗಿ ಆತನು ಮಾತನಾಡಬಾರದು. ಆ ಬಗೆಯಲ್ಲಿ ತನ್ನ ಒಳಗುಟ್ಟನ್ನು ಬಯಲು ಮಾಡುವುದು ಅನಾವಶ್ಯಕ. ಇದೂ ಅಲ್ಲದೆ, ಆ ಪ್ರಕಾರ ಮಾಡುವುದು, ಆತನನ್ನು ಎದೆಗೆಡಿಸಿ, ಆತನ ಜೀವನಯಾತ್ರೆಯಲ್ಲಿ ಆತನು ತನ್ನ ನೈಜಕರ್ತವ್ಯಗಳನ್ನು ಮಾಡಲು ಅಶಕ್ತನನ್ನಾಗಿ ಮಾಡುತ್ತದೆ. ಹಾಗೆಯೇ ಆತನು ಈ ಎರಡರ, ಎಂದರೆ ಮೊದಲು ಜ್ಞಾನ, ಎರಡನೆಯದು ಐಶ್ವರ್ಯ – ಇವುಗಳ ಅರ್ಜನೆಗಾಗಿ ಶ್ರಮಪಡಬೇಕು. ಇದು ಆತನ ಕರ್ತವ್ಯ. ಆತನು ತನ್ನ ಕರ್ತವ್ಯವನ್ನು ಮಾಡದಿದ್ದರೆ ಇದ್ದರೂ ಇಲ್ಲದಂತೆಯೇ. ಧನಸಂಪಾದನೆಗಾಗಿ ದುಡಿಯದ ಗೃಹಸ್ಥನು ಅನೀತಿವಂತನು. ಸೋಮಾರಿಯಾಗಿದ್ದುಕೊಂಡು, ಸೋಮಾರಿಯ ಜೀವನವನ್ನು ನಡೆಯಿಸಿಕೊಂಡು ಹೋಗುವುದರಲ್ಲಿ ತೃಪ್ತನಾಗಿರುವ ಗೃಹಸ್ಥನು ಅನೀತಿವಂತನು. ಏಕೆಂದರೆ, ನೂರಾರು ಮಂದಿ ಆತನನ್ನು ಆಶ್ರಯಿಸಿರುತ್ತಾರೆ. ಆತನು ಧನಸಂಪಾದನೆ ಮಾಡಿದರೆ ಮಾತ್ರ ಇತರ ನೂರಾರು ಮಂದಿಗೆ ಆತನ ಪೋಷಣೆ ದೊರೆಯುತ್ತದೆ.

ಧನಾರ್ಜನೆಗಾಗಿ ದುಡಿದು ಅದನ್ನು ಸಂಪಾದಿಸಿದ ನೂರಾರು ಮಂದಿ ಈ ಪಟ್ಟಣದಲ್ಲಿಲ್ಲದ ಪಕ್ಷಕ್ಕೆ ಎಲ್ಲಿರುತ್ತಿತ್ತು ನಾಗರಿಕತೆ? ಎಲ್ಲಿರುತ್ತಿದ್ದುವು ಅನ್ನಸತ್ರಗಳು, ಈ ದೊಡ್ಡ ಭವನಗಳು?

ಇಂತಹ ಸಂದರ್ಭದಲ್ಲಿ ಹಣವನ್ನು ಹುಡುಕಿಕೊಂಡು ಹೋಗುವುದು ಕೆಟ್ಟುದಲ್ಲ. ಏಕೆಂದರೆ, ಆ ಧನ ಕೂಡಿಡುವುದಕ್ಕಲ್ಲ, ನಾಲ್ವರಿಗೆ ಕೊಡುವುದಕ್ಕೆ, ಗೃಹಸ್ಥನು ಈ ಜೀವನದ, ಸಮಾಜದ ಕೇಂದ್ರ. ಐಶ್ವರ್ಯವನ್ನು ಗಳಿಸಿ ಅದನ್ನು ಸತ್ಕಾರ್ಯದಲ್ಲಿ ವಿನಿಯೋಗಿಸುವುದು ಆತನಿಗೆ ಒಂದು ಉಪಾಸನೆ. ಏಕೆಂದರೆ, ನಿರ್ದೋಷವಾದ ಉದ್ದೇಶ

ಸಾಧನೆಗಾಗಿ ನಿರ್ದೋಷವಾದ ಉಪಾಯಗಳ ಮೂಲಕ ಸಿರಿವಂತನಾಗಲು ಪ್ರಯತ್ನಪಡುವ ಗೃಹಸ್ಥನು, ಯತಿಯು ಗುಹೆಯಲ್ಲಿದ್ದುಕೊಂಡು ಮಾಡುವ ಪ್ರಾರ್ಥನೆಯನ್ನೇ, ತಾನೂ ಮುಕ್ತಿಲಾಭಕ್ಕಾಗಿ ಕಾರ್ಯತಃ ಮಾಡುತ್ತಿರುವನು. ಏಕೆಂದರೆ ಅವನಲ್ಲಿ ದೇವಭಕ್ತಿಯಿಂದ ಪ್ರೇರಿತವಾದ ಅದೇ ಆತ್ಮಾರ್ಪಣೆ ಮತ್ತು ತ್ಯಾಗವನ್ನು ಕಾಣುತ್ತೇವೆ.

ಒಳ್ಳೆಯ ಹೆಸರನ್ನು ಸಂಪಾದಿಸಲು ಗೃಹಸ್ಥನು ಎಲ್ಲ ರೀತಿಗಳಿಂದಲೂ ಶ್ರಮಪಡಬೇಕು. ಅವನು ಜೂಜಾಡ ಕೂಡದು, ದುಷ್ಟರ ಸಹವಾಸ ಮಾಡಕೂಡದು, ಸುಳ್ಳು ಹೇಳಕೂಡದು. ಇತರರ ತೊಂದರೆಗೆ ಕಾರಣನಾಗಬಾರದು.

ಅನೇಕ ವೇಳೆ ಜನರು ಕಾರ್ಯಸಿದ್ಧಿಗೆ ಬೇಕಾದ ಸಾಧನೆಗಳು ತಮ್ಮಲ್ಲಿಲ್ಲದೆ, ಕಾರ್ಯಕ್ಕೆ ತೊಡಗಿ ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಇತರರಿಗೆ ಮೋಸಮಾಡುವರು. ಆದರೆ ಎಲ್ಲಕ್ಕೂ ಕಾಲವೆಂಬುದೊಂದು ಉಂಟಲ್ಲವೆ? ಒಂದು ಸಮಯದಲ್ಲಿ ಕೈಗೂಡದ ಕಾರ್ಯ ಪ್ರಾಯಶಃ ಮತ್ತೊಂದು ವೇಳೆ ಫಲಪ್ರದವಾಗಬಹುದು.

ಗೃಹಸ್ಥನು ಸತ್ಯವನ್ನು ನುಡಿಯಬೇಕು. ಜನಗಳಿಗೆ ಆಪ್ಯಾಯಮಾನವಾಗಿರುವ ಮೃದುವಚನಗಳಿಂದ ಮೆಲ್ಲಗೆ ಮಾತನಾಡಬೇಕು. ಇದರಿಂದ ಇತರರಿಗೆ ಒಳ್ಳೆಯದಾಗುವುದು. ಇತರರ ವ್ಯವಹಾರವನ್ನು ಕುರಿತು ಆತ ಮಾತನಾಡಬಾರದು.

ಪರಮಯೋಗಿಗೆ ಯಾವ ಗತಿ ಪ್ರಾಪ್ತವಾಗುವುದೋ ಆ ಗತಿಯೇ ಕೆರೆ ಕಟ್ಟಿಸುವುದರಿಂದಲೂ, ರಸ್ತೆಗಳ ಪಕ್ಕಗಳಲ್ಲಿ ಸಾಲುಮರ ನಡೆಸುವುದರಿಂದಲೂ, ಮನುಷ್ಯರ ಹಾಗೂ ಪ್ರಾಣಿಗಳ ವಿಶ್ರಾಂತಿಗಾಗಿ ಛತ್ರವನ್ನು ಕಟ್ಟಿಸುವುದರಿಂದಲೂ, ರಸ್ತೆ ಮಾಡಿಸುವುದರಿಂದಲೂ, ಸೇತುವೆಗಳನ್ನು ಕಟ್ಟಿಸುವುದರಿಂದಲೂ ಗೃಹಸ್ಥನಿಗೆ ಉಂಟಾಗುತ್ತದೆ.

ಕರ್ಮಯೋಗದ ಒಂದು ಭಾಗವಿದು – ಕ್ರಿಯೆ; ಇದು ಗೃಹಸ್ಥನ ಕರ್ತವ್ಯ. ಮುಂದೆ ಇನ್ನೊಂದು ವಾಕ್ಯವಿದೆ. ಅದೇನೆಂದರೆ, "ಗೃಹಸ್ಥನು ತನ್ನ ದೇಶಕ್ಕಾಗಿ ಅಥವಾ ತನ್ನ ಧರ್ಮಕ್ಕಾಗಿ ಯುದ್ಧದಲ್ಲಿ ಮಡಿದರೆ, ಯೋಗಿಯು ಧ್ಯಾನದಿಂದ ಯಾವ ಪದವಿಯನ್ನು ಪಡೆಯುವನೊ ಅದನ್ನೇ ಇವನೂ ಹೊಂದುವನು." ಇದು ಏನನ್ನು ತೋರಿಸುತ್ತದೆಯೆಂದರೆ, ಒಬ್ಬನ ಕರ್ತವ್ಯ ಮತ್ತೊಬ್ಬನದಲ್ಲ. ಹಾಗೆಯೇ ಈ ಕರ್ತವ್ಯ ಕೀಳು, ಈ ಕರ್ತವ್ಯ ಮೇಲು ಎಂದು ಹೇಳುವಂತಿಲ್ಲ. ಪ್ರತಿಯೊಂದು ಕರ್ತವ್ಯಕ್ಕೂ ಅದರದರ ಸ್ಥಾನವಿದ್ದೇ ಇರುತ್ತದೆ. ನಮ್ಮ ಪರಿಸ್ಥಿತಿಗಳಿಗೆ ಅನುಸಾರವಾಗಿ ನಾವು ನಮ್ಮ ಕರ್ತವ್ಯಗಳನ್ನು ಮಾಡಬೇಕು. •

## ನಾರಾಯಣ ಸೇವೆ

೧೯೦೨ರ ವರ್ಷ. ಬೇಲೂರು ಮಠದಲ್ಲಿ ಸಂತಾಲ ಕೂಲಿಕಾರರು ಕೆಲಸ ಮಾಡುತ್ತಿದ್ದರು. ಆ ಸಂತಾಲರ ಪೈಕಿ ಒಬ್ಬನ ಹೆಸರು ಕಿಷ್ಟ ಎಂದು. ಸ್ವಾಮೀಜಿಗೆ ಕಿಷ್ಟನ ಮೇಲೆ ಬಹು ಪ್ರೀತಿ. ಸ್ವಾಮೀಜಿ ಕಿಷ್ಟನ ಹತ್ತಿರ ಮಾತನಾಡಲು ಹೋದರೆ ಅವನು ಹೇಳುತ್ತಿದ್ದ, "ಓ ಸ್ವಾಮೀಜಿ, ನಾವು ಕೆಲಸ ಮಾಡುವಾಗ ನೀವು ಬರಬೇಡಿ. ನಿಮ್ಮೊಡನೆ ಮಾತನಾಡುತ್ತಿದ್ದರೆ ಕೆಲಸ ಸಾಗುವುದಿಲ್ಲ. ಮೇಲ್ವಿಚಾರಕರಾದ ಸ್ವಾಮೀಜಿ ಬಂದರೆ ನಮಗೆ ಚೆನ್ನಾಗಿ ಬೈಗುಳ ಸಿಗುತ್ತೆ." ಸ್ವಾಮೀಜಿಯ ಹೃದಯ ಕರಗಿ, "ನಾನು ಅವರಿಗೆ ಹೇಳುತ್ತೇನೆ, ಅವರು ಬೈಯ್ಯುವುದಿಲ್ಲ. ನಿನ್ನ ಊರಿನ ವಿಷಯ ಹೇಳು" ಎನ್ನುತ್ತಿದ್ದರು. ಸ್ವಾಮೀಜಿ ಅವರ ಸಂಸಾರದ ವಿಷಯಗಳನ್ನೂ ಕೇಳುತ್ತಿದ್ದರು.

ಒಂದು ದಿನ ಸ್ವಾಮೀಜಿ ಕಿಷ್ಟನನ್ನು ಕೇಳಿದರು, "ನೀವು ಒಂದು ದಿನ ಇಲ್ಲಿ ಊಟ ಮಾಡುವಿರಾ?" ಕಿಷ್ಟ ಹೇಳಿದ, "ನೀವು ಮುಟ್ಟಿದ ಪದಾರ್ಥ ನಾವು ತಿನ್ನುವುದಿಲ್ಲ. ನೀವು ನಮ್ಮ ಆಹಾರಕ್ಕೆ ಉಪ್ಪು ಹಾಕಿದರೆ ನಮ್ಮ ಜಾತಿ ಹೋಗುವುದು." ಸ್ವಾಮೀಜಿ ಹೇಳಿದರು, "ನೀವು ಉಪ್ಪನ್ನೇಕೆ ತಿನ್ನಬೇಕು? ಉಪ್ಪು ಹಾಕದೆ ಪಲ್ಯ ಮಾಡಿದರೆ ನೀವು ತಿನ್ನಬಹುದು ಅಲ್ಲವೆ?" ಎಂದು ಕೇಳಿದರು. ಕಿಷ್ಟ ಒಪ್ಪಿಕೊಂಡ. ನಂತರ ಸ್ವಾಮೀಜಿಯ ಅಪ್ಪಣೆಯಂತೆ ಬ್ರೆಡ್, ಪಲ್ಯ, ಮಿಠಾಯಿ, ಮೊಸರು ಮುಂತಾದವುಗಳನ್ನು ತಂದು ಸಂತಾಲರ ಊಟಕ್ಕೆ ಸಿದ್ಧಪಡಿಸಲಾಯಿತು. ಅವರೆಲ್ಲ ತಮ್ಮ ಮುಂದೆ ಉಣ್ಣುವಂತೆ ಸ್ವಾಮೀಜಿ ಏರ್ಪಡಿಸಿದರು. ಊಟ ಮಾಡುವಾಗ ಕಿಷ್ಟ ಹೇಳಿದ: "ನಿಮಗೆ ಇಂತಹ ಪದಾರ್ಥ ಎಲ್ಲಿ ಸಿಕ್ಕಿತು? ಇದರಂತಹ ರುಚಿಯನ್ನು ನಾನೆಂದೂ ಕಂಡೇ ಇರಲಿಲ್ಲ." ಅವರಿಗೆ ಹೊಟ್ಟೆ ತುಂಬಾ ಊಟ ಮಾಡಿಸುತ್ತಾ ಸ್ವಾಮೀಜಿ ಹೇಳಿದರು: "ನೀವೆಲ್ಲಾ ನಾರಾಯಣರು, ದೇವರ ಆವಿರ್ಭಾವ. ಇಂದು ನಾನು ನಾರಾಯಣನಿಗೆ ಊಟವನ್ನರ್ಪಿಸಿದ್ದೇನೆ. ಇದೆಲ್ಲ ದರಿದ್ರನಾರಾಯಣ ಸೇವೆ." ಬಡವರಲ್ಲಿ ದೇವರನ್ನು ಕಾಣುವುದು ಎನ್ನುತ್ತಿದ್ದುದನ್ನು ಅಂದು ಸ್ವಾಮೀಜಿ ಕಾರ್ಯರೂಪದಲ್ಲಿ ನೆರವೇರಿಸಿದರು.

– **ಪ್ರೊ. ಎನ್. ಕೃಷ್ಣಸ್ವಾಮಿ** (ಆಧಾರ : *ಸ್ಫೂರ್ತಿಯ ಚಿಲುಮೆಯಾಗಿ ಸ್ವಾಮಿ ವಿವೇಕಾನಂದ*)

ಕೌಟುಂಬಿಕ ಸಾಮರಸ್ಯ

# ಆಧ್ಯಾತ್ಮಿಕತೆಯಿಂದ ಆದರ್ಶ ಕುಟುಂಬ

ಸ್ವಾಮಿ ಗೌತಮಾನಂದ

**ಕೌ**ಟುಂಬಿಕ ಸಾಮರಸ್ಯದ ವಿಷಯದಲ್ಲಿ ಜಗತ್ತಿನಾದ್ಯಂತ ಈಗಾಗಲೇ ಬಹಳ ಚರ್ಚೆ ಆಗುತ್ತಿದೆ. ಅಮೆರಿಕದಲ್ಲಿ ಆರಂಭವಾಗಿ ಕಳೆದೆರಡು ವರ್ಷಗಳಿಂದ ಎಲ್ಲೆಲ್ಲೂ ಹರಡುತ್ತಿರುವ 'ಆರ್ಥಿಕ ಹಿಂಜರಿಕೆ'ಗೆ (economic recession) ಕೂಡ ಕೌಟುಂಬಿಕ ಸಾಮರಸ್ಯದ ಅಭಾವವೇ ಕಾರಣವೆಂದು ವಿದ್ವಾಂಸರ ಅಭಿಪ್ರಾಯ. ಇದು ಹೇಗೆ ಸಾಧ್ಯ? ಆ ವಿದ್ವಾಂಸರು ಅದಕ್ಕೆ ಹೀಗೆ ಕಾರಣವನ್ನು ಕೊಡುತ್ತಾರೆ: ಅಮೆರಿಕದಲ್ಲಿ ಶೇ. ೬೨ ಭಾಗ ಕುಟುಂಬಗಳು ತಂದೆ ಅಥವಾ ತಾಯಿಯನ್ನು ಹೊಂದಿರುವ 'ಏಕಪೋಷಕ' (single parent) ಪರಿವಾರಗಳು. ಇಂಥ ಪರಿಸ್ಥಿತಿಯಲ್ಲಿ ಮಕ್ಕಳನ್ನು ನೋಡಿಕೊಂಡು, ದುಡಿದು ಸಂಪಾದಿಸುವುದು ಬಹಳ ಕಷ್ಟ. ಹೀಗಾಗಿ ಆ ಪರಿವಾರಗಳು ಶೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಿದ್ದವು. ಮಾರುಕಟ್ಟೆಯು ಕೆಲವು ಧೂರ್ತರ ಅನೈತಿಕ ನಡೆಗಳ ಪರಿಣಾಮವಾಗಿ ಮುಳುಗಿಹೋಯಿತು. ಆಗ ಆ 'ಏಕಪೋಷಕ' ಕುಟುಂಬದವರೆಲ್ಲಾ ದಿವಾಳಿಯೆದ್ದರು. ಅವರೆಲ್ಲ ದಿನನಿತ್ಯದ ಅಗತ್ಯ ವಸ್ತುಗಳನ್ನು ಕೊಳ್ಳಲೂ ಶಕ್ತಿಯಿಲ್ಲದೆ ಆರ್ಥಿಕ ಸಂಕಟದಲ್ಲಿ ಬಿದ್ದರು. ಒಂದು ವೇಳೆ ಈ ಕುಟುಂಬಗಳಲ್ಲಿ ಸಾಮರಸ್ಯ ಇದ್ದಿದ್ದರೆ, ಅವು 'ಏಕಪೋಷಕ' ವಾಗಿರುತ್ತಿರಲಿಲ್ಲ. ಆಗ ಅಷ್ಟೊಂದು ಭಾರಿ ಹಣವನ್ನು ಭದ್ರತೆಗಾಗಿ ಶೇರು ಮಾರುಕಟ್ಟೆಯಲ್ಲಿ ಹೂಡುವ ಪ್ರಸಂಗವೂ ಒದಗಿಬರುತ್ತಿರಲಿಲ್ಲ. ಇದು ಸಾಮರಸ್ಯವು ಕುಟುಂಬಕ್ಕೆ ಎಷ್ಟು ಅವಶ್ಯಕ ಎನ್ನುವುದನ್ನು ಎತ್ತಿ ತೋರಿಸುತ್ತದೆ. ಅಂತಹ ಸಾಮರಸ್ಯಕ್ಕೆ ಪ್ರೀತಿ, ಸಹನೆ, ತ್ಯಾಗ, ಸೇವೆ ಮುಂತಾದ ಆಧ್ಯಾತ್ಮಿಕ ಗುಣಗಳು ಇರಬೇಕು. ಅವುಗಳ ಅಭಾವ, ಅದರಿಂದ ಉಂಟಾಗುವ ವಿವಾಹ ವಿಚ್ಛೇದನ – ಇವೇ ಈ ದುಸ್ಥಿತಿಗೆ ಕಾರಣ ಎಂಬುದು ತಜ್ಞರ ಅಭಿಪ್ರಾಯ. ಎಷ್ಟೋ ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರೂ ಇದೇ ಮಾತನ್ನು ಹೇಳಲಿಲ್ಲವೇ? ಅವರ ಪ್ರಕಾರ ತ್ಯಾಗ–ಸೇವೆಗಳೇ ಆಧ್ಯಾತ್ಮಿಕತೆಯ ತಳಹದಿ. ಅವುಗಳ ಅಭಾವವೇ ಕೌಟುಂಬಿಕ ಸಾಮರಸ್ಯದ ನಾಶಕ್ಕೆ ನಾಂದಿ ಹಾಡುತ್ತದೆ.



ಚಿತ್ರ : ಶ್ರೀಕಾಂತ ಆಚಾರ್ಯ

ಇದಕ್ಕೂ ಹಿಂದೆ, ೨೦೦೧ರ ಸೆಪ್ಟೆಂಬರ್ ೧೧ ರಂದು ನ್ಯೂಯಾರ್ಕಿನ ವಿಶ್ವ ವ್ಯಾಪಾರ ಕೇಂದ್ರದ ಕಟ್ಟಡವನ್ನು ವಿಮಾನ ಧಾಳಿಯಿಂದ ನೆಲಸಮ ಮಾಡಿದ್ದಕ್ಕೂ ಕೌಟುಂಬಿಕ ಮೌಲ್ಯಗಳ ಅಭಾವವೇ ಕಾರಣ ಎನ್ನುವುದು ಸುಸ್ಪಷ್ಟವಾಗಿದೆ. ಅದು ಹೇಗೆ? ಅಮೆರಿಕದ ಬಹುಜನರು ಕ್ರೈಸ್ತರು. ಅವರ ಮೇಲಿನ ತೀವ್ರವಾದ ಕೋಪ ಮತ್ತು ಸೇಡು ತೋರಿಸುವ ಮನೋಭಾವವನ್ನು ಕೆಲವು ತೀವ್ರವಾದಿ ಮುಸ್ಲಿಂ ಯುವಕರು ಬಾಲ್ಯದಿಂದಲೇ ಬೆಳೆಸಿಕೊಂಡರು. ಇದೇ ಈ ದುರ್ಘಟನೆಗೆ ಕಾರಣವಾಯಿತು. ಈ ಯುವಕರು ತಮ್ಮ ಬಾಲ್ಯದಲ್ಲಿ ಆರೋಗ್ಯಕರ ಕೌಟುಂಬಿಕ ಪರಿಸರದಲ್ಲಿ ಬೆಳೆದಿದ್ದರೆ, ಈ ಬಗೆಯ ಪಾಶವೀ ಭಾವನೆಗಳಿಗೆ ತುತ್ತಾಗುತ್ತಿರಲಿಲ್ಲ. ಅವರಿಗೆ ತಮ್ಮ ಬಾಲ್ಯದಲ್ಲಿಯೇ ಪ್ರೀತಿ, ವಾತ್ಸಲ್ಯಗಳು ಧಾರಾಳವಾಗಿ ಸಿಕ್ಕಿದ್ದರೆ, ಇಂತಹ ಕುಕೃತ್ಯಗಳನ್ನು ಮಾಡುವ ಮನಃಸ್ಥಿತಿ ಬರುತ್ತಿರಲಿಲ್ಲ.

**ಇಂದು ಕೌಟುಂಬಿಕ ವ್ಯವಸ್ಥೆ ಅಸ್ಥಿರಗೊಳ್ಳುತ್ತಿರುವುದಕ್ಕೆ ಮುಖ್ಯ ಕಾರಣ ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳಲ್ಲಿನ ಅವನತಿ. ಈ ಅಂಶವನ್ನು ಹಲವು ಘಟನೆಗಳ ಮೂಲಕ ಚಿತ್ರಿಸಿ, ಉದಾತ್ತ ಗುಣಗಳ ಸವಿಸ್ತಾರ ಪರಿಚಯ ಮಾಡಿಕೊಟ್ಟಿರುವ ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳಲ್ಲಿ ಒಬ್ಬರು. ಚೆನ್ನೈ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾಗಿರುವ ಇವರು ಉತ್ತಮ ಭಾಷಣಕಾರರು, ಲೇಖಕರು; ಹಾಗೆಯೇ ಅಪಾರ ಅನುಭವ ಮತ್ತು ಉದಾರ ಹೃದಯವುಳ್ಳವರು.**

ಧರ್ಮದ್ವೇಷ ಸಲ್ಲದು ಎಂದು ಭಗವದ್ಗೀತೆ ಹೇಳುತ್ತದೆ. **'ಯೋ ನ ಹೃಷ್ಯತಿ ನ ದ್ವೇಷ್ಟಿ'** – "ಯಾರು ಹರ್ಷ ಮತ್ತು ದ್ವೇಷಗಳನ್ನು ತ್ಯಜಿಸಿರುತ್ತಾರೋ ಅವರೇ ನನ್ನ ನಿಜವಾದ ಭಕ್ತರು" ಎಂದು ಶ್ರೀಕೃಷ್ಣನು ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ಬೋಧಿಸುತ್ತಾನೆ. ಆದರೆ ಸೆಮೆಟಿಕ್ ಮತಗಳು (ಮುಖ್ಯವಾಗಿ ಕ್ರೈಸ್ತ ಮತ್ತು ಇಸ್ಲಾಂ ಮತಗಳು) ಪರಸ್ಪರ ದ್ವೇಷವನ್ನೇ ಬೋಧಿಸುತ್ತವೆ. ಇದರ ಫಲವಾಗಿ ಆ ಮತಗಳಿಗೆ ಸೇರಿದ ಅನೇಕ ಕುಟುಂಬಗಳಲ್ಲಿ ಹುಟ್ಟಿದ ಮಕ್ಕಳು ಪರಮತದ್ವೇಷ ಮತ್ತು ಅಸಹಿಷ್ಣುತೆಗಳನ್ನು ಬೆಳೆಸಿಕೊಳ್ಳುತ್ತಾರೆ. ಕ್ರಮೇಣ ಅವರು ಬೆಳೆದು ಯುವಕರಾದಾಗ ಆತಂಕವಾದಿಗಳಾಗುತ್ತಾರೆ. ೨೦೦೧, ಸೆಪ್ಟೆಂಬರ್ ೧೧ರ ದುರ್ಘಟನೆಗೆ ಇದೇ ಕಾರಣ! ಈಗಲೂ ಪಾಕಿಸ್ತಾನ ಮುಂತಾದ ದೇಶಗಳಲ್ಲಿ ಇಂತಹ ಯುವಕರ ಸಂಖ್ಯೆ ಬೆಳೆಯುತ್ತಲೇ ಇದೆ. ಇದು ಮುಂದೆ ನಡೆಯಬಹುದಾದ ಮತ್ತೊಂದು ದುರ್ಘಟನೆಗೆ ಸೂಚನೆ ಎಂಬುದನ್ನು ನಾವು ಮರೆಯಬಾರದು.

ಈ ಆಧುನಿಕ ಯುಗದಲ್ಲಿ, ಬೇರೆ ಬೇರೆ ಸಮಾಜಗಳಲ್ಲಿ ಅನೇಕ ರೀತಿಯ ಗೊಂದಲಗಳನ್ನು ನಾವು ಕಾಣಬಹುದು. ಇದಕ್ಕೆ ಹೋಲಿಸಿದಲ್ಲಿ ಭಾರತೀಯ ಸಮಾಜ ಹೆಚ್ಚು ಶಾಂತಿಯುತವೂ ಸ್ಥಿರವೂ ಆಗಿದೆ. ಇದು ನಿಜವಾಗಿಯೂ ಸೋಜಿಗವೇ ಸರಿ! ಇದಕ್ಕೆ ಕಾರಣ ನಮ್ಮ ಧರ್ಮ ಮತ್ತು ಸಂಸ್ಕೃತಿಗಳು ನಮಗೆ ನೀಡಿರುವ ಸಂಸ್ಕಾರ. ಯಾರನ್ನೂ ದ್ವೇಷಿಸಬಾರದು ಎಂಬ ಬೋಧನೆಯನ್ನು ಯುಗಯುಗಾಂತರಗಳಿಂದಲೂ ನಮ್ಮ ಧರ್ಮ ಸಾರುತ್ತ ಬಂದಿದೆ. **ಸರ್ವೇ ಜನಾಃ ಸುಖಿನೋ ಭವಂತು – ಎಲ್ಲ ಜನರೂ ಸುಖದಿಂದ ಇರಲಿ** ಎನ್ನುವುದೇ ನಮ್ಮ ಋಷಿಮುನಿಗಳ ಹಾರ್ದಿಕ ಪ್ರಾರ್ಥನೆ. ಅದೇ ನಮ್ಮ ಹೃದಯಾಳದ ಹರಕೆಯೂ ಆಗಬೇಕು.

ಪಾಶ್ಚಾತ್ಯ ಸಮಾಜಗಳು ಶೈಕ್ಷಣಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಿವೆ. ಆದರೂ ಅಲ್ಲಿನ ಜನರ ಅಂತರಂಗದಲ್ಲಿ ಅತೃಪ್ತಿ ಮತ್ತು ಅಶಾಂತಿಗಳು ಹೊಗೆಯಾಡುತ್ತಿವೆ. ಇದರಿಂದಾಗಿ ಸಾಮಾಜಿಕ ಆಚಾರ–ವಿಚಾರಗಳ ವಿರುದ್ಧ ದಂಗೆಯೇಳುವ ಪ್ರವೃತ್ತಿ ಬೆಳೆಯುತ್ತಿದೆ. ಇಂತಹ ಮನೋಭಾವನೆಯೇ ಅರುವತ್ತರ ದಶಕದಲ್ಲಿ ಅಮೆರಿಕದ 'ಹಿಪ್ಪಿ' ಚಳವಳಿಗೆ ಕಾರಣವಾಯಿತು. ಇಂತಹ ಶೂನ್ಯತೆ ಉಂಟಾಗುವುದು ಆಧ್ಯಾತ್ಮಿಕ ಮೌಲ್ಯಗಳ ಅಭಾವದಿಂದ. ಇಂತಹ ಅಭಾವವು ಆತ್ಮಸಾಕ್ಷಾತ್ಕಾರ ಅಥವಾ ಮೋಕ್ಷವೆಂಬ ಪರಮಪುರುಷಾರ್ಥದ ಜೀವನಧ್ಯೇಯವನ್ನು ಮರೆಮಾಚುತ್ತದೆ. ಇದೇ ಪಾಶ್ಚಾತ್ಯ ಜನರ ಅತೃಪ್ತಿ ಮತ್ತು ಅಶಾಂತಿಗಳಿಗೆ ಕಾರಣ.

ರಾಮಾಯಣವು ರಚನೆಗೊಂಡದ್ದು ಸುಮಾರು ಐದು ಸಾವಿರ ವರ್ಷಗಳ ಹಿಂದೆ. ಅನಂತರ ಮಹಾಭಾರತ ಮತ್ತು ಪುರಾಣಗಳು ರಚಿತವಾದುವು. ಇವುಗಳಲ್ಲೆಲ್ಲಾ 'ಆದರ್ಶಕುಟುಂಬ'ದ ಮಾದರಿಗಳು ಚಿತ್ರಿಸಲ್ಪಟ್ಟಿವೆ. ತಾಯಿ, ತಂದೆ–ಮಕ್ಕಳು, ಗಂಡ–ಹೆಂಡತಿ, ಅಣ್ಣ–ತಮ್ಮ, ಅಕ್ಕ–ತಂಗಿ – ಈ ಸಂಬಂಧಗಳು ಹೇಗಿರಬೇಕು ಎಂಬುದಕ್ಕೆ ಉತ್ತಮ ನಿದರ್ಶನಗಳನ್ನು ಇವುಗಳಲ್ಲಿ ನಾವು ಕಾಣಬಹುದು. ಈ ಆದರ್ಶಗಳನ್ನು ಅನುಸರಿಸಿ ಕೋಟ್ಯಂತರ ಜನರು ಕುಟುಂಬದಲ್ಲಿ ಶಾಂತಿಯನ್ನು ಪಡೆದುಕೊಂಡಿದ್ದಾರೆ, ಸಾಂಸಾರಿಕ ಸೌಖ್ಯವನ್ನು ಅನುಭವಿಸಿದ್ದಾರೆ. ತಮ್ಮ ಮಕ್ಕಳು, ಮೊಮ್ಮಕ್ಕಳಿಗೂ ಇದನ್ನೇ ಹೇಳಿಕೊಟ್ಟುಹೋಗಿದ್ದಾರೆ! ಆದ್ದರಿಂದಲೇ, ಸಾಮಾನ್ಯವಾಗಿ ಭಾರತೀಯರಲ್ಲಿ (ಹಿಂದೂಗಳಲ್ಲಿ ಎಂದರೆ ತಪ್ಪೇನಿಲ್ಲ) 'ಆಧ್ಯಾತ್ಮಿಕತೆಯಿಂದ ಕೂಡಿದ ಕುಟುಂಬವೇ ಸ್ಥಿರವಾದ ಸುಖವಾದ ಕುಟುಂಬ; ಉಳಿದದ್ದೆಲ್ಲ ಬರಿಯ ತೋರಿಕೆಯ, ಅಶಾಶ್ವತವಾದ ಸುಖಭ್ರಾಂತಿ ಮಾತ್ರ ಇರುವ ಸಂಸಾರಗಳು' ಎಂಬ ನಂಬಿಕೆ ಆಳವಾಗಿ ಬೇರೂರಿಬಿಟ್ಟಿದೆ. ಇದನ್ನು ಅಲ್ಲಗಳೆಯುವವರೂ ಇದ್ದಾರೆ. ಆದರೆ, ಹೀಗೆ ವಾದಿಸುವವರ ಜೀವನವೇ ಕೆಲವು ವರ್ಷಗಳ ನಂತರ ತಲೆಕೆಳಗಾದ ನಿದರ್ಶನಗಳಿವೆ. ಇದನ್ನು ಕಂಡು, ತಮ್ಮ ನಿಷ್ಕರ್ಷೆಯೇ ಸರಿ ಎಂದು ಭಾರತೀಯರು ದೃಢವಿಶ್ವಾಸವನ್ನು ತಳೆಯುತ್ತಿರುವುದೂ ಸುಳ್ಳೇನಲ್ಲ!

'ಧರ್ಮ' ಅಥವಾ 'ಆಧ್ಯಾತ್ಮಿಕತೆ' ಎಂದರೇನು? ಧಾರ್ಮಿಕ ಗುಣಗಳಿಂದ ಕೂಡಿರುವುದೇ ಧರ್ಮ ಅಥವಾ ಅಧ್ಯಾತ್ಮ ಎನ್ನಿಸಿಕೊಳ್ಳುತ್ತದೆ. ಆ ಗುಣಗಳು ಯಾವುವು? **ಸತ್ಯ, ಧೈರ್ಯ, ಪವಿತ್ರತೆ, ನಿಸ್ವಾರ್ಥತೆ, ತ್ಯಾಗ, ಸೇವೆ, ಸಹನೆ, ಕ್ಷಮೆ, ಶ್ರದ್ಧೆ, ಪ್ರಾರ್ಥನೆ** – ಇವೇ ಆ ಉದಾತ್ತ ಗುಣಗಳು. ಇವು ಪ್ರಮುಖವಾದ ಆಧ್ಯಾತ್ಮಿಕ ಮೌಲ್ಯಗಳಾಗಿರುವಷ್ಟೇ, ಸಾಮಾಜಿಕ ಮೌಲ್ಯಗಳೂ ಹೌದು. ಇವುಗಳನ್ನು ಹೊಂದಿರುವವರೇ ಸಂತರು, ಸತ್ಪುರುಷರು, ಒಳ್ಳೆಯವರು, ಸಾಧುಗಳು ಎನ್ನಿಸಿಕೊಳ್ಳುತ್ತಾರೆ. 'ಒಳ್ಳೆಯವನಾಗಿರಪ್ಪ' ಎಂದು ಹಿರಿಯರು ಕಿರಿಯರನ್ನು ಸಾಮಾನ್ಯವಾಗಿ ಆಶೀರ್ವದಿಸುತ್ತಾರಷ್ಟೆ. ಇದರರ್ಥ, 'ಮೇಲೆ ಹೇಳಿದ ಸದ್ಗುಣಗಳನ್ನು ಮೈಗೂಡಿಸಿಕೊಂಡು, ಅದನ್ನು ಆಚರಿಸು' ಎಂದು. ಇದೇ ಈ ಹಾರೈಕೆಯ ತಾತ್ಪರ್ಯ.

ಸಾಮಾನ್ಯ ಜನರು ಧನ, ಇಂದ್ರಿಯ ಸುಖ, ಕೀರ್ತಿ, ವೈಭವ ಇವುಗಳನ್ನು ಆಶಿಸುತ್ತಾರೆ. ಅವು ಅಂಥವರಿಗೆ ಬೇಕೇ ಬೇಕು. ಆದರೆ ಇವುಗಳ ಗಳಿಕೆಯ ಪ್ರಯತ್ನದಲ್ಲಿ, ಮೇಲೆ ಹೇಳಿದ ಆಧ್ಯಾತ್ಮಿಕ ಮೌಲ್ಯಗಳನ್ನು ಬಿಟ್ಟುಬಿಡಬಾರದು. ಆಗ ಮಾತ್ರ ಲೌಕಿಕ ಸುಖಸಂಪತ್ತುಗಳು ಎಲ್ಲರಿಗೂ ಸಮನಾಗಿ ದೊರೆಯಲು ಸಾಧ್ಯ. ಇಲ್ಲದಿದ್ದರೆ, ಪರಸ್ಪರ ಸ್ಪರ್ಧೆ, ಹಿಂಸೆಗಳು ಹೆಚ್ಚಾಗಿ, ಎಲ್ಲರ ಧನ, ಸುಖಗಳೂ ನಾಶವಾಗುವ ಸ್ಥಿತಿ ಬಂದುಬಿಡುತ್ತದೆ.

ಇನ್ನು 'ಧರ್ಮದಿಂದ ಕೌಟುಂಬಿಕ ಸಾಮರಸ್ಯ ಹೇಗೆ ಸಾಧ್ಯ?' ಎನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ನೋಡೋಣ.

ರಾಮಮೂರ್ತಿ (ಹೆಸರು ಬದಲಾಯಿಸಿದೆ) ಒಬ್ಬ ಸತ್ಯನಿಷ್ಠ ಯುವಕ. ಉನ್ನತ ಅಂಕಗಳನ್ನು ಪಡೆದು M.Sc. ಯಲ್ಲಿ ತೇರ್ಗಡೆಯಾದ. ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ Ph.D. ವ್ಯಾಸಂಗ ಮಾಡಲು ಆಯ್ಕೆಯಾದ. ಆದರೆ ವಿಶ್ವವಿದ್ಯಾನಿಲಯದಲ್ಲಿದ್ದ ಭ್ರಷ್ಟ ಅಧಿಕಾರಿಗಳು ಇದಕ್ಕೆ ಹತ್ತುಸಾವಿರ ರೂಪಾಯಿ ಲಂಚ ಕೇಳಿದರು. ಆದರೆ ಅವನು ಕೊಡಲು ನಿರಾಕರಿಸಿಬಿಟ್ಟ. ಆದ್ದರಿಂದ ಅವನಿಗೆ Ph.D. ಗೆ ಪ್ರವೇಶ ಸಿಕ್ಕಲೇ ಇಲ್ಲ. ಅಲ್ಲಿಲ್ಲಿ ಕೆಲಸ ಹುಡುಕಿದ ಮೇಲೆ ಕಡೆಗೆ ಕೇಂದ್ರೀಯ ಮೀಸಲು ಪೊಲೀಸ್ ಪಡೆಯಲ್ಲಿ (CRPF) ಕೆಲಸ ಸಿಕ್ಕಿತು. ಕೆಲವೇ ವರ್ಷಗಳಲ್ಲಿ ಡೆಪ್ಯುಟಿ ಕಮಾಂಡಂಟ್ ಆಗಿ, ದೊಡ್ಡ ಅಧಿಕಾರಿಯೇ ಆಗಿಬಿಟ್ಟ.

ಒಂದು ಸಲ ಮೀಸಲು ಪೊಲೀಸ್ ಪಡೆಗೆ ನೂರು ಜನ ಪೇದೆಗಳನ್ನು ಆಯ್ಕೆ ಮಾಡಿಕೊಳ್ಳಲು ನಡೆಸಬೇಕಾದ ಪರೀಕ್ಷೆಯ ನಿರ್ವಹಣೆ ನೋಡಿಕೊಳ್ಳಲು ರಾಮಮೂರ್ತಿಯನ್ನು ಕೇರಳಕ್ಕೆ ಕಳಿಸಿದರು. ಸುಮಾರು ಹತ್ತು ಸಾವಿರ ಅಭ್ಯರ್ಥಿಗಳು ಇದ್ದರು. ಬಹಳ ಕಷ್ಟಪಟ್ಟು ೧೦೦ ಜನರನ್ನು ಇವನು ಆಯ್ಕೆ ಮಾಡಿ, ಪಟ್ಟಿಯನ್ನು ತಯಾರು ಮಾಡಿದ. ಇನ್ನೇನು ಅದನ್ನು ಪ್ರಕಟಿಸಬೇಕು ಅಷ್ಟರಲ್ಲಿ, ಅಲ್ಲಿನ ಮುಖ್ಯಮಂತ್ರಿಗಳ ಪರವಾಗಿ ಇಬ್ಬರು ಸರ್ಕಾರಿ ಅಧಿಕಾರಿಗಳು ಒಂದು ಸೂಟ್‌ಕೇಸ್ ಪೂರ್ತಿ ಹಣದೊಂದಿಗೆ ಅವನನ್ನು ಭೇಟಿ ಮಾಡಿದರು. ಮುಖ್ಯಮಂತ್ರಿಗಳ ಕಡೆಯ ೪೦ ಅಭ್ಯರ್ಥಿಗಳನ್ನು ಪಟ್ಟಿಯಲ್ಲಿ ಸೇರಿಸಬೇಕೆಂದು ಕೇಳಿಕೊಂಡರು. ಅದಕ್ಕೆ ಪ್ರತಿಯಾಗಿ ನೋಟುಗಳ ಕಂತೆಗಳನ್ನೇ ಆಮಿಷವಾಗಿ ಒಡ್ಡಿದರು. ರಾಮಮೂರ್ತಿ ಕೆರಳಿ ಕೆಂಡವಾದ. "ನಿಮ್ಮನ್ನು ಈಗಲೇ ಲಂಚದ ಆಮಿಷ ಒಡ್ಡಿದ್ದಕ್ಕಾಗಿ ದಸ್ತಗಿರಿ ಮಾಡುತ್ತೇನೆ" ಎಂದು ಕೂಗಾಡಿದ. ಬಂದಿದ್ದ ಅಧಿಕಾರಿಗಳು ಬೆದರಿ, ಸೂಟ್‌ಕೇಸ್‌ನೊಂದಿಗೆ ಕಾಲುಕಿತ್ತರು. ರಾಮಮೂರ್ತಿ ತಾನು ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿ, ಅವರಿಗೆಲ್ಲ ನೇಮಕಾತಿಯ ಆದೇಶವನ್ನು ಕೊಟ್ಟು ಹಿಂದಿರುಗಿದ. ಅವನ ಮನಸ್ಸು ಯಾವುದೋ ಒಂದು ಸ್ವರ್ಗೀಯ ಆನಂದದಲ್ಲಿ ನಲಿದಾಡುತ್ತಿತ್ತು. ನಮ್ಮ ದೇಶದ ಧ್ಯೇಯಮಂತ್ರ **'ಸತ್ಯಮೇವ ಜಯತೇ'** ಎಂದಲ್ಲವೇ. ಇದು ಸತ್ಯದ ವಿಜಯವಲ್ಲದೆ ಇನ್ನೇನು!

ಇದು ಅಲ್ಲಿಗೇ ಮುಗಿಯಲಿಲ್ಲ. ೨-೩ ವರ್ಷಗಳ ನಂತರ ಒಂದು ರೈಲ್ವೇ ನಿಲ್ದಾಣದಲ್ಲಿ ಒಬ್ಬ CRPF ಪೇದೆ ಹಠಾತ್ತನೆ ರಾಮಮೂರ್ತಿಯ ಕಾಲುಮುಟ್ಟಿ ನಮಸ್ಕರಿಸಿದ. ಆಶ್ಚರ್ಯದಿಂದ "ಯಾರಪ್ಪ ನೀನು?" ಎಂದು ವಿಚಾರಿಸಿದಾಗ, ಅವನು ಕೊಟ್ಟ ಉತ್ತರ ಹೃದಯಸ್ಪರ್ಶಿಯಾಗಿತ್ತು. "ಸರ್, ಎರಡು ವರ್ಷಗಳ ಹಿಂದೆ ನೀವು ಆಯ್ಕೆ ಮಾಡಿದ್ದ ನೂರು ಜನ ಪೇದೆಗಳಲ್ಲಿ ನಾನೂ ಒಬ್ಬ. ಅಂದು ನೀವು ನನ್ನನ್ನು ನಿರಾಕರಿಸಿಬಿಟ್ಟಿದ್ದರೆ, ನಾನೂ, ನನ್ನ ತಂದೆತಾಯಿಯರೂ ಒಟ್ಟಾಗಿ ಆತ್ಮಹತ್ಯೆ ಮಾಡಿಕೊಳ್ಳುವುದೆಂದು ನಿರ್ಧರಿಸಿದ್ದೆವು. ಆದರೆ ಹಾಗಾಗಲಿಲ್ಲ. ನೀವು ನಮ್ಮನ್ನು ಕಾಪಾಡಿದ ದೇವರು, ಸರ್" ಎನ್ನುತ್ತಾ ಅವನು ಕಣ್ಣೀರುಗರೆದ. ಇದನ್ನು ಕೇಳಿ ರಾಮಮೂರ್ತಿಯ ಹೃದಯ ದಿವ್ಯ ಆನಂದದಿಂದ ತುಂಬಿಹೋಯಿತು. "ನನ್ನ ಒಂದು ಸಣ್ಣ ಸತ್ಯನಿಷ್ಠೆಯಿಂದ ದೊಡ್ಡದೊಂದು ಅನಾಹುತ ತಪ್ಪಿಹೋಯಿತು. ಹೇ ಭಗವಂತ! ನನ್ನನ್ನು ಹೀಗೆಯೇ ಯಾವಾಗಲೂ ಸತ್ಯವಂತನಾಗಿಯೇ ಇಟ್ಟಿರು" ಎಂದು ಅವನ ಮನಸ್ಸು ದೇವರನ್ನು ಪ್ರಾರ್ಥಿಸಿತು. ಸತ್ಯನಿಷ್ಠೆ, ಲೋಭತ್ಯಾಗ ಮುಂತಾದ ಆಧ್ಯಾತ್ಮಿಕ ಮತ್ತು ನೈತಿಕ ಗುಣಗಳಿಂದ ಎಷ್ಟೊಂದು ಕುಟುಂಬಗಳಲ್ಲಿ ಶಾಂತಿ ಮತ್ತು ನೆಮ್ಮದಿಗಳು ನೆಲೆಸಲು ಸಾಧ್ಯ ಎನ್ನುವುದಕ್ಕೆ ಇದೊಂದು ಸಣ್ಣ ನಿದರ್ಶನ ಮಾತ್ರ.

ಕೃಷ್ಣಪ್ಪ (ಹೆಸರು ಬದಲಿಸಿದೆ) ರಾಮಕೃಷ್ಣ ಮಠದ ಭಕ್ತ. ಅವನ ಪತ್ನಿ ಕೂಡ ಆಶ್ರಮದ ಭಕ್ತೆ. ಇಬ್ಬರಿಗೂ ಶ್ರೀರಾಮಕೃಷ್ಣರಲ್ಲಿ ಅಪಾರವಾದ ಭಕ್ತಿ. ಈ ಮೂಲಕವೇ ಅವರಿಬ್ಬರ ಮದುವೆಯೂ ಜರುಗಿತು ಎನ್ನುತ್ತಾನೆ ಕೃಷ್ಣಪ್ಪ.